# ಲೋಕಧ್ಯಾನದಲ್ಲಿ 'ಸಂಭೋಳಿ' ಕಂಡ ಸತ್ಯ-ಮಿಥ್ಯಗಳ ಸಂ-ದರ್ಶನ

**ಡಾ. ಎಂ. ಭೈರಪ್ಪ**
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ. ನಾರಾಯಣಪುರ, ಬೆಂಗಳೂರು-560077
byrappa@kristujayanti.com

**ABSTRACT:**

**New consciousness and new genres are creating new spirit in Kannada literature. From village songs to short poems (Hanikavitas), the rich, eloquent journey of language is constantly going on to quell the angst of the world. As the face of the world is changing, there are changes in people's minds and in the designs of organizations, whether good or bad. The poet who sees this with his inner eyes wants to give a new design to the movement of the speech. The rays of light that arise from such a universe embody innumerable awareness. Similarly, 'Hanikavitas' have their own importance in the poetic path that is created in Kannada poetry and can give a bold and clear new vision; Popularity has also increased. P.Lankesh, Dundiraj, Jaraganahalli Shivshankar, K.Ravindranath etc. have made innovative experiments in the composition of hanikavitas. Young Poet Bommekallu Venkatesh, who has taken a new step in this direction, has tried to unveil the multiface of modernity in a subaltern sensibility. In addition, he has created a new sound in Kannada honey poetry.**

**KEY WORDS:**

**ಪ್ರಜ್ಞಾಪರಂಪರೆ, ಸಾಹಿತ್ಯಯಾನ, ಸಬಾಲ್ಟ್ರನ್ ಸಂವೇದನೆ, ಹನಿಗವನ, ಧರ್ಮಶಾಹಿ, ಜಾತಿಶಾಹಿ, ಬಂಡವಾಳಶಾಹಿ, ಸಂಭೋಳಿ, ದೇಶಪ್ರೇಮ, ಅಸ್ಪೃಶ್ಯತೆ, ಜನವಿಭಜನೆ, ಅಂತರ್ಯುದ್ಧ, ಬಹುವಾಸ್ತವ, ಬೆಳಕಿನ ಮೌನ**

ಲೋಕಸಂಸ್ಕೃತಿಯ ಪ್ರಜ್ಞಾಪರಂಪರೆಯಲ್ಲಿ ಜೀವನಧ್ಯಾನದಿಂದ ಮೂಡಿದ ಅರಿವು ಕಾಲಕಾಲಗಳನ್ನೂ ದಾಟಿಕೊಂಡು ಬಂದು ಈ ಹೊತ್ತಿಗೂ ಯಾವೊತ್ತಿಗೂ ದೀಪಧಾರಿಯಾಗಿ ಕಂಗೊಳಿಸುತ್ತಿದೆ. ಜೀವನಧ್ಯಾನಿಗಳು ತಮ್ಮೊಳಗೆ ಲೋಕವನ್ನೂ, ಲೋಕದೊಳಗೆ ತಮ್ಮನ್ನೂ ಕನ್ನಡಿಯಾಗಿಸಿಕೊಂಡು ನಿತ್ಯಬೆಳಗುವ ಸತ್ಯ-ಮಿಥ್ಯಗಳ ಸಂ-ದರ್ಶನ ಮಾಡುತ್ತಾರೆ. ಮೌನ-ಮಾತುಗಳ ನಡುವಿನ ಮಧ್ಯಮದೀವಿಗೆ ಹಿಡಿದು ಬೆಳಕಿನ ಬೀಜಗಳನ್ನು ಚೆಲ್ಲುತ್ತಾ ನಡೆಯುತ್ತಾರೆ. ಇಂಥ ಧ್ಯಾನಿಗಳ ಸಾಲಿನಲ್ಲಿ ಅಪರಿಮಿತ ಸಂವೇದನಾಶೀಲರ ವಿಸ್ತರಣೆಯಂತೆ ಕಾಣುವ, ಅಭಿವ್ಯಕ್ತಿ ಪರಂಪರೆಯಲ್ಲಿ ಅನನ್ಯತೆ ಸಾಧಿಸಿಕೊಂಡಿರುವ ಸಾಹಿತ್ಯಚೇತನರೂ ಅಸಂಖ್ಯ. ಲೋಕವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ನುಂಗಿನೊಣೆಯುತ್ತಿರುವ ಕಾರ್ಗತ್ತಲೊಳಗೆ ಕರಗಿಹೋಗದೆ, ಅಲ್ಲಮನು ಹೇಳುವಂತೆ 'ಅಪರಿಮಿತದ ಕತ್ತಲೆಯೊಳಗೆ ವಿಪರೀತ ಬೆಳಕನಿತ್ತವ'ರಂತೆ ನಿರ್ಭಿಡೆಯಿಂದ ನಡೆದ ಸಕಾಲಿಕ ಸಾಕ್ಷೀಪ್ರಜ್ಞೆಗಳು ಕನ್ನಡ ಸಾಹಿತ್ಯಯಾನದೊಳಗೂ ಅನೇಕ ಇವೆ.

ಕನ್ನಡ ಸಾಹಿತ್ಯಯಾನದಲ್ಲಿ ಹೊಸಪ್ರಜ್ಞೆ ಹಾಗೂ ಹೊಸಪ್ರಕಾರಗಳು ಸಹೃದಯಲೋಕದಲ್ಲಿ ಹೊಸಚೈತನ್ಯವನ್ನು ಮೂಡಿಸುತ್ತಲೇ ಬರುತ್ತಿವೆ. ಹಳ್ಳಿಯ ಹಾಡುಗಳಿಂದ ಹಿಡಿದು ಹನಿಗವಿಕತೆಗಳ ವರೆಗೂ

ಬಹುಸಮೃದ್ಧವಾದ, ಬಹುಸ್ಫುಟವಾದ ವಾಗ್ಸೃಷ್ಟಿಯು ಲೋಕತಲ್ಲಣಗಳನ್ನು ತಣಿಸುವ ಕಾಯಕ ನಿರಂತರವಾಗಿ ನಡೆಯುತ್ತಿದೆ. ಲೋಕಚಹರೆಗಳು ಬದಲಾಗುತ್ತಿರುವಂತೆ ಜನಮನಗಳಲ್ಲೂ, ಸಂಘಸಂಸ್ಥೆಗಳ ವಿನ್ಯಾಸಗಳಲ್ಲಿಯೂ ಸುಕೃತವೋ ಅಥವಾ ವಿಕೃತವೋ ಆದಂತಹ ಸ್ಥಿತ್ಯಂತರಗಳು ಜರುಗುತ್ತಿವೆ. ಇದನ್ನು ತನ್ನೊಳಗಿನ ಸೂಕ್ಷ್ಮಗಣ್ಣಿನಿಂದ ಕಾಣುವ ಕವಿಯು ನಡೆಯ ನುಡಿಗೆ, ನುಡಿಯ ನಡೆಗೆ ಹೊಸವಿನ್ಯಾಸವನ್ನು ನೀಡಲಿಚ್ಛಿಸುತ್ತಾನೆ. ಅಂಥ ಕವಿಲೋಕದಿಂದ ಮೂಡಿದ ಬೆಳಕಿನ ಕಿರಣಗಳು ಅಗಣಿತ ಅರಿವನ್ನು ಮೈವೆತ್ತುಕೊಂಡು ಬರುತ್ತವೆ. ಹಾಗೆ ಕನ್ನಡ ಕವಿಯಾನದಲ್ಲಿ ಸೃಜನೆಗೊಂಡು ಪುಟ್ಟದಾದರೂ ದಿಟ್ಟವೂ ಸ್ಫುಟವೂ ಆದ ಹೊಸನೋಟವನ್ನು ನೀಡಬಲ್ಲ ಕವಿಮಾರ್ಗದಲ್ಲಿ 'ಹನಿಗವನ'ಗಳಿಗೆ ತನ್ನದೇ ಆದ ಮಹತ್ವವಿದೆ; ಜನಪ್ರಿಯತೆಯೂ ದಕ್ಕಿದೆ. 'ಕರಿಯು ಕನ್ನಡಿಯೊಳಡಗಿದಂತೆ', 'ಕಿರಿದರೊಳ್ ಪಿರಿದರ್ಥವುಳ್ಳ', 'ಹನಿಹನಿ ಕೂಡಿ ಜಲನಿಧಿಯಾದಂಥ', 'ಝೆನ್–ಹಾಯ್ಕು' ಮಾದರಿಯ ಹನಿಗವಿತೆಗಳ ರಚನೆಯಲ್ಲಿ ಪಿ.ಲಂಕೇಶ್, ಡುಂಡಿರಾಜ್, ಜರಗನಹಳ್ಳಿ ಶಿವಶಂಕರ್, ರವೀಂದ್ರನಾಥ್ ಮೊದಲಾದವರು ವಿನೂತನ ಪ್ರಯೋಗಗಳನ್ನು ಮಾಡಿದ್ದಾರೆ. ಈ ಮಾರ್ಗದಲ್ಲಿ ಹೊಸ ಹೆಜ್ಜೆಮೂಡಿಸಿರುವ ಕವಿಮಿತ್ರ ಬೊಮ್ಮೇಕಲ್ಲು ವೆಂಕಟೇಶ್ ಅವರು ಸಬಾಲ್ಟ್ರನ್ ಸಂವೇದನೆಯಲ್ಲಿ ಆಧುನಿಕತೆಯ ವಿರಾಟ್‌ಸ್ವರೂಪವನ್ನು ಅನಾವರಣ ಮಾಡಲು ಪ್ರಯತ್ನಿಸಿದ್ದಾರೆ. ಜೊತೆಗೆ ಕನ್ನಡ ಹನಿಗವಿತೆಯೊಳಗೆ ಹೊಸದನಿ ಮೂಡಿಸಿದ್ದಾರೆ.

ವಸಾಹತೋತ್ತರ ಸಂದರ್ಭದ ಒತ್ತಡಗಳು ಆಧುನಿಕತೆಯ ಹಲವು ಸಕಾರಾತ್ಮಕ ಸಂತಿಗಳನ್ನು ಹೊತ್ತುತಂದಂತೆ ವಿಕಾರಾತ್ಮಕ ಸಂರಚನೆಗಳನ್ನೂ ಸೃಜಿಸಿದೆ. ಬೆಂಕಿಯನ್ನು ಹೊತ್ತು ತಿರುಗುವ ರೂಪಕದಲ್ಲಿ ಲೋಕವಾಸ್ತವದ ದ್ವಂದ್ವಗಳಿಗೆ ಕವಿ ಕನ್ನಡಿ ಹಿಡಿದಿದ್ದಾರೆ: **'ಬೆಂಕಿಯನ್ನು ಹೊತ್ತು ತಿರುಗುತ್ತಿದ್ದಾರೆ ಜಗದೊಳೆಲ್ಲರೂ, ವ್ಯತ್ಯಾಸವೆಂದರೆ ಕೆಲವರು ಬೆಳಕಿಗಾಗಿ ಬೆಂಕಿಯನ್ನು ಹೊತ್ತಿಸಿದರೆ ಅನೇಕರು ಜಗವನ್ನು ಸುಡಲು'**. **'ಉರುವುಲು ಇಲ್ಲದೆಯೇ ಜಗತ್ತಿನಲ್ಲಿ ಅತಿಹೆಚ್ಚು ದಹಿಸಿ ಶಾಖವನ್ನು ಉತ್ಪಾದನೆ ಮಾಡುವ ಶಕ್ತಿ ಸಾಮರ್ಥ್ಯ ಇರುವುದು ಕೇವಲ ಜಾತಿ ಧರ್ಮಗಳಿಗೆ ಮಾತ್ರ....'**[೧] ವ್ಯಾವಹಾರಿಕ ಆವರಣದಲ್ಲಿ ಅರ್ಥಹೀನತೆಗೆ ಒಳಗಾದ 'ಪರ್ಸೆಂಟೇಜ್' ಪರಿಕಲ್ಪನೆಯ ವಿವೇಚನೆ: **ಶಿಕ್ಷಕರಿಂದಲೇ ಪರ್ಸೆಂಟೇಜ್‌ನ ಹಿಂದೆ ಬೀಳುವುದನ್ನು ಕಲಿತ ವಿದ್ಯಾರ್ಥಿಗಳು ನೌಕರಿ ಸಿಕ್ಕ ನಂತರವೂ ಪರ್ಸೆಂಟೇಜ್‌ಗಾಗಿ ಕಿತ್ತಾಡುವುದನ್ನು ಬಿಟ್ಟಿಲ್ಲ....'**[೨] ಆಧುನಿಕ ಸಂದರ್ಭದಲ್ಲಿ ಬದಲಾದ ಕುಲ ವ್ಯಾಖ್ಯಾನ: **ಕುಲದಲ್ಲಿ ಎರಡು ವಿಧ; ಒಂದು–ನೆಲೆ ಕಂಡುಕೊಳ್ಳದ ಮೊದಲು; ಎರಡು–ನೆಲೆಕಂಡುಕೊಂಡ ನಂತರ ಕಾಣುತ್ತದೆ....ಗೆಲ್ಲುವ ಮುಂಚಿನದ್ದು; ಗೆದ್ದ ನಂತರದ್ದು....**[೩] ಜನಮುಖಿಯಾಗಬೇಕಿದ್ದ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಧನಮುಖಿಯಾದುದ್ದರ ವಿಡಂಬನೆಯೂ ಇಲ್ಲಿದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲೂ ಧರ್ಮಶಾಹಿ–ಜಾತಿಶಾಹಿ–ಬಂಡವಾಳಶಾಹಿಗಳ ಅಪವಿತ್ರ ಮೈತ್ರಿಯ ಪರಿಣಾಮದಿಂದಾಗಿ 'ಸಂಭೋಳಿ'ತನಕ್ಕೆ ಅಳಿಗಾಲವಿಲ್ಲ:

**ಎಷ್ಟೇ**
**ಶಕ್ತಿವಂತ**

DOI: 10.59176

**ಜ್ಞಾನವಂತ**
**ಎನಿಸಿಕೊಂಡರೂ**
**ಸಂಬೋಳಿ**
**ಎನ್ನುತ್ತಲೇ**
**ತನ್ನ**
**ಉಳಿವನ್ನು**
**ಸಂಬಾಳಿಸಿಕೊಂಡು**
**ಹೋಗಬೇಕಾದ....**
**ದುಸ್ಥಿತಿ**
**ಈ ದೇಶದ**
**ಬಹುಸಂಖ್ಯಾತರದ್ದು....**[೪]

ಭಾರತ ಮಾತ್ರವಲ್ಲದೇ ಇಡೀ ವಿಶ್ವದ ಅನ್ನದಾತರಾದ ರೈತರು ಕಾಲಾನುಕಾಲದಿಂದಲೂ ಉಳ್ಳವರು ಸೃಷ್ಟಿಸುವ ಉಸಿರುಗಟ್ಟಿಸುವ ವಾತಾವರಣದಲ್ಲೇ ನರಳಬೇಕಾಗಿದೆ. ಇದಕ್ಕೆ ಪೂರಕವಾಗಿ ರೈತಾದಿ ಜನಮತ ಪಡೆದು ಪ್ರಜಾಪ್ರಭುತ್ವ ಕಾಪಾಡುವ ಪ್ರಮಾಣ ಮಾಡಿ ಕುರ್ಚಿಯೇರಿದವರು ನಡೆದುಕೊಳ್ಳುತ್ತಿರುವುದು ಈ ನೆಲಕ್ಕೆ ಬಗೆದ ಬಹುದೊಡ್ಡ ದ್ರೋಹ. ಗಡಿ–ಗುಡಿಗಳನ್ನು ಮಾತ್ರ ದೇಶಪ್ರೇಮವೆನ್ನುತ್ತ, ಕೃಷಿಭಾರತದ ಮಣ್ಣಿನ ಮಕ್ಕಳನ್ನು, ಕಾಯಕಭಾರತದ ಕೋಟ್ಯಾಂತರ ಶ್ರಮಜೀವಿಗಳನ್ನು ಹಣ ಮತ್ತು ಅಧಿಕಾರಕ್ಕಾಗಿ ನಯವಂಚನೆಗೆ ಒಳಗುಮಾಡುವುದು ಎಂದಾದರೂ ದೇಶಪ್ರೇಮವೆನ್ನಲಾದೀತೆ? 'ಸಮಗ್ರ ದೇಶಪ್ರೇಮ'ವನ್ನು ತುಳಿತುಳಿವ ಗೋಮುಖ ವ್ಯಾಘ್ರದಂಥ 'ಮುಖವಾಡದ ದೇಶಪ್ರೇಮ'ವು ಮನುಕುಲಕ್ಕೆ ಮಾರಕ. ಈ ಬಗೆಯ ದೇಶವಂಚಕ ಮುಖವಾಡವೊಂದನ್ನು ಬಯಲುಮಾಡುವಂತಿದೆ ಕವಿನುಡಿ:

**ಜಗತ್ತಿನ**
**ಬಹುತೇಕ**
**ಮಂದಿ**
**ಅರಿಯಬೇಕಾದ**
**ಮ್ಯಾಜಿಕ್**
**ಎಂದರೆ....**
**ರೈತ**
**ಇರುವುದು**
**ಭೂಮಂಡಲದ**
**ಅತ್ಯಂತ**
**ಶ್ರೀಮಂತರ**
**ನಡುವೆ....**[೫]

'ಅಸ್ಪೃಶ್ಯತೆ'ಯೆಂಬುದು ಭಾರತದಲ್ಲಿ ಇಂದಿಗೂ ವಾಸಿಮಾಡಲಾಗದಂಥ ಮನೋರೋಗವಾಗಿ ಉಲ್ಬಣಗೊಳ್ಳುತ್ತಿದೆ. ಜಾತಿ, ಮತಗಳ ಮೂಲಕ ಹರಡಿಕೊಂಡ ಈ ಕ್ರೂರವೈರಸ್ ದಿನದಿಂದ ದಿನಕ್ಕೆ ಗಟ್ಟಿಯಾಗುತ್ತಿದೆ. ದೇಶವೊಂದರ ಜನತೆಯನ್ನು ಜನ್ಮಾಧಾರಿತವಾಗಿ ವಿಭಜನೆ ಮಾಡುವ ಅಮಾನವೀಯ ನಡೆಗೆ

ಸಾವಿರಾರು ವರ್ಷಗಳ ಚರಿತ್ರೆ ಇದೆ. ಇದರ ವರ್ತಮಾನ ವಾಸ್ತವ ಸ್ವರೂಪವನ್ನೂ ಹಾಗೂ ಆರ್ಥಿಕತೆ–ಧಾರ್ಮಿಕತೆಯೊಂದಿಗಿನ ಅಸ್ಪೃಶ್ಯತೆಯ ಅಂತರ್‌ಸಂಬಂಧಗಳನ್ನು ಕವಿ ವ್ಯಂಗ್ಯ–ವಿಷಾದದ ದನಿಯಲ್ಲಿ ಹೀಗೆ ಮೂಡಿಸಿದ್ದಾರೆ:

**ಪಂಚಾಂಗ
ಓದಿ
ಮನೆ
ನಿರ್ಮಿಸಲು
ಹೇಳಿದ
ಶಾಸ್ತ್ರಿ....
ಬೆವರು
ಸುರಿಸಿ,
ಪಾಯ,
ಗೋಡೆ
ಸರಿಯಾಗಿ
ಕೂರಿಸಿ
ಮನೆ
ನಿರ್ಮಿಸಿದನು
ಮೇಸ್ತ್ರಿ....
ಗೃಹ ಪ್ರವೇಶವಾಯಿತು–
ದೇವರ
ಗುಡಿ
ಶಾಸ್ತ್ರಿಗೆ
ಮನೆಯ
ಗಡಿ
ಮೇಸ್ತ್ರಿಗೆ...**[೬]

ಹೀಗೆ, ಒಳಗೊಳ್ಳುವ–ಹೊರಗೊಳ್ಳುವ ಶ್ರಮಿಕ ಜನಕೇಂದ್ರಿತ ಅಸ್ಪೃಶ್ಯ ಕಥನಗಳು ಕಾಲದುದ್ದಕ್ಕೂ ಕಂಡುಬರುತ್ತವೆ. ತಲೆ ಶ್ರೇಷ್ಠ, ಕಾಲು ಕನಿಷ್ಠವೆಂಬ ಜನವಿಭಜನೆಯು ಈ ನೆಲವನ್ನು ನಿರಂತರ ಘಾಸಿಗೊಳಿಸುತ್ತಿದೆ; ಶ್ರಮಿಕಸಮುದಾಯಗಳಿಗೆ ವಿಶ್ವಾಸದ್ರೋಹಿ ಅಂಟುವಿಷವಾಗಿದೆ.

ವಿಶ್ವಾಸಘಾತುಕ ಅವಕಾಶವಾದಿತನದ ನಿರ್ಲಜ್ಜ ನಡೆ–ನುಡಿಯನ್ನು ಪೂರ್ವೋತ್ತರ ನಡಾವಳಿಯ ಅನಾವರಣದಲ್ಲಿ ಕವಿಯು ಪ್ರತಿಮಿಸಿರುವ ಬಗೆ: **ಸಾಗರದಲ್ಲಿ ಮುಳುಗುವವನಿಗೆ, ಆಸರೆಯಾಗಿ ಬದುಕಿಸಿದ ಹುಲ್ಲುಕಡ್ಡಿ, ಆ ಕ್ಷಣಕ್ಕೆ ದೇವರು....ಧಣಿವಾರಿಸಿಕೊಂಡು ಹೊರಬಂದ ನಂತರ, ಅದೇ ಹುಲ್ಲು, ಅವನ ಕಾಲ ಕೆಳಗಿನ ಕಸ.....**’[೭]. ಇದಕ್ಕೆ ಅಧಿಕಾರದ ಮದ, ಅರಿವುಗೇಡಿತನ ಹಾಗೂ ಅಂತರ್‌ವಿಮರ್ಶಾರಾಹಿತ್ಯತೆ ಪ್ರಮುಖ ಕಾರಣವಾಗಿದೆ. ಎಲ್ಲರೂ ಅವರವರ ಸೇಫ್ಟಿ ಜೆರ್ನಿಗಳಲ್ಲಿ ವಿಹರಿಸುತ್ತಾ ಕನಿಷ್ಟ ಕಾರುಣ್ಯವನ್ನೂ ಕಳೆದುಕೊಂಡಂತೆ ಕಳೆದುಹೋಗಿದ್ದಾರೆ. ಇದನ್ನು ಕವಿ ಮಾರ್ಮಿಕವಾಗಿ ತಿಳಿಸುತ್ತಾ, **‘ಈ ದೇಶದಲ್ಲಿ ನಾವೆಲ್ಲರೂ ಕಣ್ಣು ಕಾಣುವ**

**ಕುರುಡರೆ....ಸಮಾಜವೇ ಅದಕ್ಕೆ ಸಾಕ್ಷಿ.; ಈ ಜಗತ್ತಿನ ಅತಿದೊಡ್ಡ ದುರಂತವೆಂದರೆ, ಮನುಷ್ಯರಾಗಿ ಹುಟ್ಟಿಯೂ ಮನುಷ್ಯರಾಗಿ ಎಂದು ಹೇಳುವುದು....'**[೮] ಎಂಬ ವಾಸ್ತವ–ವ್ಯಂಗ್ಯಕ್ಕೆ ಕನ್ನಡಿ ಹಿಡಿದಿದ್ದಾರೆ.

ಅಕ್ಷರದ ಮುಖೇನ ಈ ನೆಲದಲ್ಲಿ ಅಸಾಮಾನ್ಯವಾದ ಕ್ರಾಂತಿಯುಂಟಾಗಿದ್ದು ಚಾರಿತ್ರಿಕ ಸಂಗತಿ. ಅಕ್ಷರದ ಗುತ್ತಿಗೆಯನ್ನು ಸಾರ್ವತ್ರೀಕರಿಸಿದ ನಂತರದಲ್ಲಿ ಭಾರತದ ಬಹುಜನಸಮುದಾಯಗಳಲ್ಲಿಮೂಡಿದ ನವಜಾಗೃತಿಯು ನವಮನ್ವಂತರವನ್ನೇ ಸೃಷ್ಟಿಸಿತು. ಆದರೆ ಪಾರಂಪರಿಕವಾಗಿ ಅಕ್ಷರದಿಂದ ಮಾಡಿಕೊಂಡಿದ್ದ ಗುತ್ತಿಗೆಗೂ, ಆಧುನಿಕವಾಗಿ ಅಕ್ಷರದಿಂದ ದಕ್ಕಿದ ಗತ್ತಿಗೂ ಉಂಟಾದ ಮದೋನ್ಮಾದಕ್ಕೆ ಅರಿವು ದೂರವಾಗುತ್ತ ಸ್ವಹಿತವೇ ಮುಖ್ಯವಾಗಿ ಭ್ರಷ್ಟತೆಯ ಅಕರಾಳ ವಿಕರಾಳ ರೂಪಗಳು ನಿರಂತರವಾಗಿ ಹುಟ್ಟಿಕೊಳ್ಳುತ್ತಿವೆ. ಅಕ್ಷರಸ್ಥರ ಅಪರಿಮಿತ ಭ್ರಷ್ಟಾಚಾರಕ್ಕೆ, ವಿಷಕೃತ ವರ್ತನೆಗಳಿಗೆ ಇಡೀ ಭಾರತವೇ ನಲುಗುತ್ತಿದೆ. ಇದು, ಕವಿಯ 'ವಿಷಾಕ್ಷರ' ಹನಿಗವಿತೆಯಲ್ಲಿ ಅನ್ನ–ಅಕ್ಷರಗಳ ಅನುಸಂಧಾನದಲ್ಲಿ ಹೀಗೆ ಮೂಡಿದೆ:

**ಅನ್ನಕ್ಕೆ**
**ಬೆರೆಸಿದ್ದ**
**ವಿಷ**
**ದೇಹವನ್ನ**
**ಕೊಂದಿತ್ತು....**
**ಅಕ್ಷರಕ್ಕೆ**
**ಬೆರೆಸಿರುವ**
**ವಿಷ**
**ದೇಶವನ್ನು**
**ಕೊಲ್ಲುತ್ತಿದೆ....**[೯]

ಹೀಗೆ, ಇಲ್ಲಿನ ಪ್ರತಿಯೊಂದು ಹನಿಗವಿತೆಗೂ ವಿಸ್ತೃತ ವ್ಯಾಖ್ಯಾನಗಳನ್ನು ಬರೆಯುವಷ್ಟು ಆಳವಾದ ಒಳನೋಟಗಳಿವೆ. ಅವುಗಳ ಆಸ್ವಾದನೆಯು ಓದುಗ–ಸಹೃದಯರಿಗೂ ದಕ್ಕುವುದರಲ್ಲಿ ಯಾವುದೇ ಸಂಶಯವಿಲ್ಲ.

ಒಂದೊಂದು ಸಂಗತಿಯನ್ನು ತನ್ನದೇ ದೃಷ್ಟಿಕೋನದಿಂದ ನಿರ್ವಚಿಸಿಕೊಳ್ಳುವ ಬಹುವಾದಗಳು ಅಸ್ತಿತ್ವದಲ್ಲಿವೆ. ಪ್ರತಿಯೊಂದು ವಾದವೂ ತನ್ನ ಕಣ್ಣೋಟದಲ್ಲಿ ಕಂಡ ವಾಸ್ತವ–ಅವಾಸ್ತವಗಳನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ಸೃಜಿಸಲ್ಪಟ್ಟಿರುತ್ತದೆ. ಆದರೆ ಕೆಲವೊಮ್ಮೆ, ಪ್ರತೀ ವಾದವೂ ಕಂಡಿದ್ದಕ್ಕಿಂತ ಭಿನ್ನವಾದ ವಾಸ್ತವವೂ ಅಸ್ತಿತ್ವದಲ್ಲಿರುತ್ತದೆ. ಸೂಕ್ಷ್ಮಮತಿಯುಳ್ಳ ವಿವೇಕಿಗೆ ಯಾವುದೇ ವಾದದ ಚಲಾಚಲ ನೆಲೆಗಳು ಮತ್ತು ಮಾನವತಾ ಗಮ್ಯತೆಯ ಅರಿವಿರುತ್ತದೆ. ಅಂಥ ವಿವೇಕವು ಸ್ವವಿಮರ್ಶಾ ಸಂಚಲನೆಯಿಂದ ಸಾಧ್ಯ ಎಂಬ ಸಂಗತಿಯನ್ನು ಕನ್ನಡಿಯ ರೂಪಕದಲ್ಲಿ ಕವಿ ಧ್ವನಿಸುತ್ತಿರುವಂತಿದೆ:

**ಮುಂದೆ**

**ನಿಂತಾಗ**
**ದೇಹವನ್ನು**
**ಮಾತ್ರ**
**ತೋರಿಸುವ**
**ಕನ್ನಡಿ....**
**ಒಳಗಿನ**
**ಕುಟಿಲಗಳನ್ನು**
**ಅದುಮಿಟ್ಟು**
**ಬಾಹ್ಯಕ್ಕೆ**
**ಸೋತು**
**ನನಗೆ**
**ವಂಚಿಸಿತ್ತು....**[೧೦]

ವಾದಪ್ರಣೀತ ಲೋಕದೃಷ್ಟಿಯಂತೆಯೇ ಕಾಲಚಲನೆಯಲ್ಲಿ ಉಂಟಾದ ಲೋಕಪಲ್ಲಟಗಳ ವಾಸ್ತವದರ್ಶನವು ರೂಢಿಗತ ಭ್ರಮೆಗಳನ್ನು ಬೆಚ್ಚಿಬೇಳಿಸುತ್ತವೆ. ಹಾಗೆ ಬೆಚ್ಚಿಬೀಳಿಸುವ ಬಹುವಾಸ್ತವಗಳತ್ತ ಬೆರಳು ತೋರುತ್ತ, ವಾದಮುಖೀ ಭ್ರಮೆಗಳನ್ನು ಮೀರಿದ ಹೊಸವಿವೇಕದತ್ತ ಕರೆದೊಯ್ಯುವ ಕಿರುಕಾವ್ಯಝರಿಗಳು ಇಲ್ಲಿ ತಣ್ಣಗೆ ಹರಿಯುತ್ತವೆ. ದೇಶಾಭಿಮಾನ, ಭಾಷಾಭಿಮಾನ, ಜಾತ್ಯಾಭಿಮಾನ, ಮದ್ಯಾಭಿಮಾನ, ಪಕ್ಷಾಭಿಮಾನ, ರೈತಾಭಿಮಾನ, ಯುದ್ಧಾಭಿಮಾನ, ಸ್ತ್ರೀಯಾಭಿಮಾನ, ದಲಿತಾಭಿಮಾನ, ಧನಾಭಿಮಾನ, ನಾಯಕಾಭಿಮಾನ, ಪ್ರೇಮಾಭಿಮಾನ – ಮೊದಲಾದ ಆಧುನಿಕಯುಗದ ‘ಅಭಿಮಾನಯಾನ’ದ ಅನಂತಮುಖಗಳು ಅನಾವರಣಗೊಂಡಿವೆ. ರೂಢಿಗತ ಗ್ರಹಿಕೆಗಳನ್ನು ಹಿಡಿದೆಳೆದು, ಅನುಭವಲೋಕದ ಅನನ್ಯದರ್ಶನವನ್ನು ನೀಡುತ್ತವೆ. ಕೆಲವು ಕಡೆ ವಾಚ್ಯವಾಯಿತಾ ಎಂದುಕೊಳ್ಳುತ್ತಿದ್ದಂತೆ ಪ್ರತಿಮಾತ್ಮಕ ನುಡಿಶಿಲ್ಪದ ಸರಳತೆ ಅಚ್ಚರಿಮೂಡಿಸುತ್ತದೆ. ಆಧುನಿಕ ಸ್ತ್ರೀ–ಯಾನ ಕುರಿತಾದ ಒಂದೆರಡು ಕಾವ್ಯಸ್ಪಂದನೆಯಲ್ಲಿ ಮತ್ತಷ್ಟು ಸೂಕ್ಷ್ಮಕೃಷಿ ಸಾಧ್ಯವಿತ್ತೇನೋ ಎನಿಸುತ್ತದೆ. ಹಾಸ್ಯಭರಿತ ವಿಡಂಬನೆಯಷ್ಟೇ ಮುಖ್ಯವಾಗಿ ವಾಸ್ತವಿಕತೆಯನ್ನು ಮಾರ್ಮಿಕವಾಗಿಯೂ ಅರಿವು ಮೂಡಿಸಬಲ್ಲ ಅಭಿವ್ಯಕ್ತಿಯನ್ನೂ ಇಲ್ಲಿನ ಹನಿಗವಿತೆಯಲ್ಲಿ ಕಾಣುವುದು ವಿಶೇಷವಾಗಿದೆ.

ತೀವ್ರ ಒತ್ತಡ, ಹಣಮುಖೀ ಅಸ್ತಿತ್ವದ ಆತುರ, ಅನಾರೋಗ್ಯಕರ ಪೈಪೋಟಿ ಹಾಗೂ ಅಮಾನವೀಯ ಅಸ್ಮಿತಾ ಸಂಘರ್ಷಗಳಲ್ಲಿ ಸಮಕಾಲೀನ ಬದುಕು ದುಸ್ತರಗೊಳ್ಳುತ್ತಿದೆ. ವಿವಿಧ ಒತ್ತಡಗಳು ಜನವಿವೇಕವನ್ನು ನುಂಗಿಹಾಕಿವೆ. ಉಲ್ಲಾಸ ಮತ್ತು ಉತ್ಸಾಹಗಳ ಉತ್ಪಾದನಾ ಪರಿಭಾಷೆಯಲ್ಲಿ ಉದ್ಯಮೀಕರಣಗೊಳ್ಳುತ್ತಿವೆ. ಈ ನಡುವೆ ಸಾವಧಾನದ ಸಂವೇದನೆಯನ್ನು ನೀಡಬಲ್ಲ ಶಕ್ತಿಯು ಸಾಹಿತ್ಯದಂಥ ಕಲಾಯಾನಕ್ಕೆ ಇದ್ದಾಗ್ಯೂ ಅದರ ಪ್ರಭಾವಲಯ ಕಿರಿದಾಗುತ್ತಲೇ ಇದೆ. ಅಪರೂಪದ ಕೆಲವು ಜನರ ಸಾಹಿತ್ಯಸವಿಯ ಸಹೃದಯತೆಯನ್ನು ಹೊರತುಪಡಿಸಿದರೆ, ಉಳಿದ ಸಾಹಿತ್ಯಾಸ್ವಾದಕರು ಸಾಹಿತ್ಯವಲಯದವರೇ ಆಗಿರುತ್ತಾರೆ. ಕಾದಂಬರಿ, ಕಥೆ ಮೊದಲಾದ ಸಾಹಿತ್ಯದ ಕೆಲವು ಪ್ರಕಾರಗಳಿಗೆ ಸಾಹಿತ್ಯೇತರ ವಲಯದವರು–ಜನಸಾಮಾನ್ಯರು ತಮ್ಮ

ಸಹೃದಯತೆಯಿಂದ ಸ್ಪಂದಿಸುತ್ತಿರುವುದು ಅಭಿಮಾನದ ಸಂಗತಿ. ವಿವಿಧ ಒತ್ತಡದಲ್ಲಿದ್ದಾಗ್ಯೂ ಸಾಹಿತ್ಯಾಸ್ವಾದನೆಯ ಇಂಥ ಸಹೃದಯರ ಅರಿವು ಮತ್ತು ಆನಂದವನ್ನು ಬೆಳಗುವಲ್ಲಿ ಹನಿಗವಿತೆಗಳ ಪಾತ್ರವೂ ಹಿರಿದು. ಕೆಲವು ವಿಮರ್ಶಕರು, ಹನಿಗವಿತೆಗಳು ಗಂಭೀರ ಕಾವ್ಯವಲ್ಲ ಎಂದೂ ಟೀಕಿಸಿರುವುದುಂಟು. ಆದರೆ, 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತೆ ಹನಿಗವಿತೆಗಳಲ್ಲಿ ಕಂಡುಬರುವ ಸಂಕೀರ್ಣ ಸಮಾಜ ಬಗೆಗಿನ ಸುಧೀರ್ಘವಲ್ಲದ ಸರಳ-ವಿರಳ ಸರೂಪಕ ಚಿತ್ರಣವು ಮನೋಜ್ಞವಾದುದು. ಒತ್ತಡದ ಬದುಕಿನಲ್ಲಿ 'ಸಾಹಿತ್ಯದ ಓದು-ಆಸ್ವಾದನೆ' ನಿರ್ಲಕ್ಷ್ಯಕ್ಕೆ ಒಳಗಾಗಿ ಕ್ಷೀಣಗೊಳ್ಳುತ್ತಿರುವಾಗ ಅನಾಯಾಸವಾಗಿ ಓದಿಸಿಕೊಂಡು ಆಯಾಸ ಕಳೆವ ಹನಿಗವಿತೆಗಳು ಚೈತನ್ಯಶೀಲ ಸಿಹಿಗುಳಿಗೆಗಳಂತೆ ಆಪ್ತವೆನಿಸಿವೆ. ಹನಿಹನಿಯಲ್ಲೂ ಅರಿವನ್ನೂ ಆನಂದವನ್ನೂ ಅರಳಿಸಬಲ್ಲ ಜೇನಿನಂಥ ರಸಧಾರೆ ಹರಿಸುವ ಈ ಕಾವ್ಯಧಾರೆ ಸರ್ವಾದರಣೀಯ.

ಇಂಥ ಕಾವ್ಯಧಾರೆಯ ಗುರುತ್ವವನ್ನೂ ಮಹತ್ವವನ್ನೂ ಎತ್ತಿಹಿಡಿಯುವ ಸೃಜನತ್ವದ ಮೂಲಕ ಕವಿಮಿತ್ರ ಬೊಮ್ಮೇಕಲ್ಲು ವೆಂಕಟೇಶ್ ಅವರು ಸಮಕಾಲೀನ ವಿಶ್ವ-ಭಾರತದ ವಾಸ್ತವಗಳನ್ನು ಅರಿಯಬೇಕಾದ ಹೊಸ ಕಣ್ಣೋಟವನ್ನು ಈ ಸಂಕಲನದಲ್ಲಿ ನೀಡಿದ್ದಾರೆ. ಭಾರತವನ್ನು ಬೆಳಗುವ ದಿಸೆಯಲ್ಲಿ ಕಂಡ ಕನಸುಗಳೆಲ್ಲಾ ಇಂದು ಅಧಿಕಾರಕೇಂದ್ರಿತ ಹಿತಾಸಕ್ತಿಗಳಲ್ಲಿ ಕರಗಿಹೋಗಿ ತಂತಮ್ಮ ಪಕ್ಷಗಳ ಮೂಗಿನ ನೇರಕ್ಕೆ ಮೌಲ್ಯವಿವೇಚನೆ ನಡೆಯುತ್ತಿದೆ. ಜನವಿರೋಧಿ ವಿಷಬೇರುಗಳನ್ನು ಕಿತ್ತುಹಾಕುವ ಕೈಗಳಿಗೆ ಕೊರತೆಯಾಗಿ ಸಾಂಸ್ಕೃತಿಕ ಬಹುಸ್ತರಗಳಲ್ಲಿ ವಿಷಬೇರುಗಳು ಮತ್ತಷ್ಟು ಆಳವಾಗಿ ಬೇರುಬಿಟ್ಟುಕೊಳ್ಳುತ್ತಿವೆ. ಅಸ್ಮಿತೆಗಳ ಅಂತರ್ಯುದ್ಧ ಹಾಗೂ ಭಕ್ತಿಪರಾಕಾಷ್ಠೆಯ ಬಹಿರ್ಯುದ್ಧಗಳು ನಿರ್ಲಜ್ಜೆಯಿಂದ ನಡೆಯುತ್ತಿವೆ. ಭಾರತವು ತಂತ್ರಜ್ಞಾನದಲ್ಲಿ ಮುಂದುವರೆಯುತ್ತಿರುವಂತೆ ಕಾಣುತ್ತಿದ್ದರೂ ಸಾಮಾಜಿಕವಾಗಿ ಹಿಮ್ಮುಖವಾಗಿ ಚಲಿಸುವಂಥ ವಾತಾವರಣ ಸೃಷ್ಟಿಯಾಗುತ್ತಿದೆ. ಇಂತಹ ಬಹುವಾಸ್ತವ ಸಂಗತಿಗಳು ಇಲ್ಲಿನ ಹನಿಗವನಗಳಲ್ಲಿ ಸ್ಫುಟವಾಗಿ ಮೂಡಿಬಂದಿವೆ. ಒತ್ತಡಗೊಳಗೆ ಕಳೆದುಹೋದ ವಿವೇಕವನ್ನು ಬೆಳಗುವ ಹಾಸ್ಯ-ಭಾಷ್ಯಗಳಿವೆ. ಒಳ-ಹೊರಗಿನ ವಿಷವಿಳಿಸುವ ಮದ್ದು-ಬುದ್ಧಿಯ ನುಡಿಗುಳಿಗೆಗಳಿವೆ. ಹೀಗೆ, ಕಾರ್ಗತ್ತಲು ಆವರಿಸಿಕೊಂಡು ಊರೇ ಇಲ್ಲವೇನೋ ಎಂಬಂತಿರುವ 'ಭಯಾನಕ ಮೌನ'ದ ಊರೊಳಗೆ, ಪುಟ್ಟಗುಡಿಸಲ ಒಡಲಿಂದ ಮೂಡಿ, ತಣ್ಣತಣ್ಣಗೆ ಹೊತ್ತಿಕೊಂಡ 'ಬೆಳಕಿನ ಮೌನ'ದೊಳು ತಮ್ಮ ಊರನ್ನೂ, ತಲೆಮಾರನ್ನೂ, ತನ್ನಿರವನ್ನೂ ತೋರಬಲ್ಲ ಬುಡ್ಡೀದೀಪದಂತೆ 'ಸಂಭೋಳಿ' ಕಂಗೊಳಿಸುತ್ತದೆ.

**ಕೊನೆ ಟಿಪ್ಪಣಿಗಳು:**

೧. ಸಂಭೋಳಿ; ಬೊಮ್ಮೇಕಲ್ಲು ವೆಂಕಟೇಶ್; ಬಯಲು ಪುಸ್ತಕ, ಚಿಂತಾಮಣಿ; ೨೦೨೧; ಪುಟ ೩೩.

೨. ಸಂಭೋಳಿ; ಬೊಮ್ಮೇಕಲ್ಲು ವೆಂಕಟೇಶ್; ಬಯಲು ಪುಸ್ತಕ, ಚಿಂತಾಮಣಿ; ೨೦೨೧; ಪುಟ ೨೫.
೩. ಸಂಭೋಳಿ; ಬೊಮ್ಮೇಕಲ್ಲು ವೆಂಕಟೇಶ್; ಬಯಲು ಪುಸ್ತಕ, ಚಿಂತಾಮಣಿ; ೨೦೨೧; ಪುಟ ೧೯.
೪. ಸಂಭೋಳಿ; ಬೊಮ್ಮೇಕಲ್ಲು ವೆಂಕಟೇಶ್; ಬಯಲು ಪುಸ್ತಕ, ಚಿಂತಾಮಣಿ; ೨೦೨೧; ಪುಟ ೨೦.
೫. ಸಂಭೋಳಿ; ಬೊಮ್ಮೇಕಲ್ಲು ವೆಂಕಟೇಶ್; ಬಯಲು ಪುಸ್ತಕ, ಚಿಂತಾಮಣಿ; ೨೦೨೧; ಪುಟ ೪೬.
೬. ಸಂಭೋಳಿ; ಬೊಮ್ಮೇಕಲ್ಲು ವೆಂಕಟೇಶ್; ಬಯಲು ಪುಸ್ತಕ, ಚಿಂತಾಮಣಿ; ೨೦೨೧; ಪುಟ ೫೧.
೭. ಸಂಭೋಳಿ; ಬೊಮ್ಮೇಕಲ್ಲು ವೆಂಕಟೇಶ್; ಬಯಲು ಪುಸ್ತಕ, ಚಿಂತಾಮಣಿ; ೨೦೨೧; ಪುಟ ೨೧.
೮. ಸಂಭೋಳಿ; ಬೊಮ್ಮೇಕಲ್ಲು ವೆಂಕಟೇಶ್; ಬಯಲು ಪುಸ್ತಕ, ಚಿಂತಾಮಣಿ; ೨೦೨೧; ಪುಟ ೪೨.
೯. ಸಂಭೋಳಿ; ಬೊಮ್ಮೇಕಲ್ಲು ವೆಂಕಟೇಶ್; ಬಯಲು ಪುಸ್ತಕ, ಚಿಂತಾಮಣಿ; ೨೦೨೧; ಪುಟ ೪೫.
೧೦. ಸಂಭೋಳಿ; ಬೊಮ್ಮೇಕಲ್ಲು ವೆಂಕಟೇಶ್; ಬಯಲು ಪುಸ್ತಕ, ಚಿಂತಾಮಣಿ; ೨೦೨೧; ಪುಟ ೫೯.

**ಪರಾಮರ್ಶನ ಗ್ರಂಥಗಳು:**

೧. ಸಂಭೋಳಿ; ಬೊಮ್ಮೇಕಲ್ಲು ವೆಂಕಟೇಶ್; ಬಯಲು ಪುಸ್ತಕ, ಚಿಂತಾಮಣಿ; ೨೦೨೧
೨. ಹೊಸಗನ್ನಡ ಸಾಹಿತ್ಯ ಚರಿತ್ರೆ; ಎಲ್.ಎಸ್.ಶೇಷಗಿರಿರಾವ್; ಅಂಕಿತ ಪುಸ್ತಕ, ಬೆಂಗಳೂರು; ೨೦೦೯.
೩. ಕನ್ನಡ ಸಾಹಿತ್ಯ ಚರಿತ್ರೆ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ; ಅಂಕಿತ ಪುಸ್ತಕ, ಬೆಂಗಳೂರು; ೨೦೧೪.
೪. ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ; ವಿವಿಧ ಲೇಖಕರು; ಪ್ರ.ಸಂ.ಬರಗೂರು ರಾಮಚಂದ್ರಪ್ಪ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು; ಪರಿಷ್ಕೃತ ಮುದ್ರಣ–೨೦೨೧.
೫. ಆಧುನಿಕ ಕನ್ನಡ ಸಾಹಿತ್ಯ: ನಡೆದು ಬಂದ ದಾರಿ; ಎಲ್.ಎಸ್.ಶೇಷಗಿರಿರಾವ್; ಅಂಕಿತ ಪುಸ್ತಕ, ಬೆಂಗಳೂರು; ೨೦೨೨.